ಕರ್ನಾಟಕ ಸರ್ಕಾರ

# ಕೆ.ಜಿ.ಎಫ್
# ನಗರಾಭಿವೃದ್ಧಿ ಪ್ರಾಧಿಕಾರ

**ಕೆ.ಜಿ.ಎಫ್,ಕೋಲಾರ ಜಿಲ್ಲೆ.**

## 2021–2022 ನೇ ಸಾಲಿನ
## ವಾರ್ಷಿಕ ವರದಿ

**ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ**

## ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ 2020–21ನೇ ಸಾಲಿನ ವಾರ್ಷಿಕ ವರದಿ
## (ದಿನಾಂಕ : 01–04–2021ರಿಂದ 31–03–2022)

### 1) ಪ್ರಾಧಿಕಾರದ ರಚನೆ :

ಕೋಲಾರ ಜಿಲ್ಲೆಯಲ್ಲಿ ಕೆ.ಜಿ.ಎಫ್. ನಗರವು ಒಂದು ಪ್ರಮುಖ ನಗರವಾಗಿದ್ದು, 2011 ನೇ ಜನಗಣತಿಯ ಪ್ರಕಾರ ಕೆ.ಜಿ.ಎಫ್. ನಗರದ ಜನ ಸಂಖ್ಯೆ 1,62,230 ಆಗಿರುತ್ತದೆ, ಸ್ಥಳೀಯ ಯೋಜನಾ ಪ್ರದೇಶದ ಜನ ಸಂಖ್ಯೆ 2,67,183 ಆಗಿರುತ್ತದೆ. ನಗರದ ಆಡಳಿತವನ್ನು ರಾಬರ್ಟ್‌ಸನ್‌ಪೇಟೆ ನಗರ ಸಭೆಯು ನೋಡಿಕೊಳ್ಳುತ್ತಿದೆ. ನಗರದ ಯೋಜನಾ ಬದ್ಧ ಬೆಳವಣಿಗೆಯನ್ನು ನೋಡಿಕೊಳ್ಳಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ1961ರನ್ವಯ ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರವನ್ನು 1988 ರಲ್ಲಿರಚಿಸಲಾಗಿದ್ದು, ಹಾಲಿ ಕಾರ್ಯ ನಿರ್ವಹಿಸುತ್ತಿದೆ. ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ ಸುಮಾರು 216 ಚ.ಕಿ.ಮೀ. ಗಳಾಗಿರುತ್ತದೆ.

**ಪ್ರಾಧಿಕಾರದ ಧ್ಯೇಯೋದ್ದೇಶಗಳು:–**

ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ಮುಖ್ಯ ಉದ್ದೇಶಗಳು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬಡಾವಣೆಗಳನ್ನು ನಿರ್ಮಿಸಿ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚುವುದು, ನಗರ ಪಟ್ಟಣಗಳ ಯೋಜನಾ ಬದ್ಧ ಬೆಳವಣಿಗೆಗಳಿಗೆ ವ್ಯಾಪಕಾಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸುವುದು ಹಾಗೂ ಭೂ ಪರಿವರ್ತನೆ ಮಾಡಲು ನಿರಾಕ್ಷೇಪಣಾ ಪತ್ರ ನೀಡುವುದು ಹೊಸ ಕಟ್ಟಡಗಳನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ಹಾಗೂ ರೂಪುರೇಖೆಗಳಿಗೆ ನಕ್ಷೆಗಳಿಗೆ ಅನುಮೋದನೆ ನೀಡುವುದು ಇತ್ಯಾದಿಗಳಾಗಿರುತ್ತದೆ.

(1) ನಗರ ಪಟ್ಟಣಗ್ರಾಮೀಣ ಪ್ರದೇಶಗಳ ಬೆಳವಣಿಗೆ ಸೌಂದರ್ಯ ಮತ್ತು ಚಟುವಟಿಕೆಗಳ ದೃಷ್ಠಿಯಿಂದ ಮಹಾಯೋಜನೆ ತಯಾರಿಸುವುದು.

(2) ಮುಖ್ಯ ಗುರಿಗಳೇನೆಂದರೆ, ಕ್ರಮ ಬದ್ಧ ಭೂ–ಬಳಕೆ, ರಸ್ತೆ ಸಂಪರ್ಕ ವ್ಯವಸ್ಥೆ, ಶೀಕ್ಷಣ, ಆರೋಗ್ಯ, ಮನರಂಜನೆ, ಅಗತ್ಯ ಮೂಲಭೂತ ಸೌಕರ್ಯ ಮತ್ತು ಆರ್ಥಿಕ ಸಮೃದ್ದಿಗಾಗಿ ಕಾರ್ಯಗಳನ್ನು ರೂಪಿಸುವುದು.

(3) ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಬರುವ ಅನಧಿಕೃತ ಬೆಳವಣಿಗೆಗಳನ್ನು ನಿಯಂತ್ರಿಸುವುದು.

(4) ಭೂಮಿಯ ಸಮತೋಲನ ಉಪಯೋಗಕ್ಕೆ ಲಭ್ಯವಿರುವ ಮನರಂಜನೆಯ ಸೌಕರ್ಯವನ್ನು ಕಾಪಾಡಿಕೊಂಡು ಅದನ್ನು ಉತ್ತಮಪಡಿಸಲುಕ್ರಮ ತೆಗೆದುಕೊಳ್ಳುವುದು.

ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಹಾಗೂ ಕಾರ್ಯರೂಪಕ್ಕೆ ತಂದು ಸಾರ್ವಜನಿಕರ ಹಿತದೃಷ್ಠಿಯನ್ನು ಗಮನದಲ್ಲಿ ಇಟ್ಟುಕೊಂಡು ನಾಗರೀಕರಿಗೆ ಕಡಿಮೆದರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವುದು.

### 2) ಆಡಳಿತ ವ್ಯವಸ್ಥೆ:

ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ 156 ಬೆಂರೂಪ್ರಾ 2019(ಇ–ಆಫೀಸ್) ದಿನಾಂಕ 02/01/2020 ರಂತೆ ಅಧ್ಯಕ್ಷರಾಗಿ ಈ ಕೆಳಕಂಡಂತೆ ಅಧಿಕಾರ ವಹಿಸಿಕೊಂಡು ಕಾರ್ಯ ನಿರ್ವಹಿಸುತ್ತಿರುತ್ತಾರೆ.

| ಕ್ರ. ಸಂ. | ಅಧ್ಯಕ್ಷರ ಹೆಸರು | ಅಧಿಕಾರದ ಅವಧಿ |
|---|---|---|
| 1 | ಶ್ರೀಮತಿ ಅಶ್ವಿನಿ.ಎಸ್ | 09–01–2020 ರಿಂದ ಅಧಿಕಾರದಲ್ಲಿರುತ್ತಾರೆ. |

ಆಯುಕ್ತರು, ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತದೆ. ಯೋಜನೆಗೆ ಸಂಬಂಧಿಸಿದ ತಾಂತ್ರಿಕ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾರೆ. ಪ್ರಾಧಿಕಾರದಲ್ಲಿ ಐದು ಮಂದಿ ಅಧಿಕಾರಿ/ಸಿಬ್ಬಂದಿ ಇದ್ದು, ಈ ಪೈಕಿ ಇಬ್ಬರು ನೌಕರರು ದಿನಗೂಲಿ ನೌಕರರಾಗಿರುತ್ತಾರೆ.

**ಅ)ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 2021–2022ನೇ ವಾರ್ಷಿಕ ಅವಧಿಯಲ್ಲಿ ಖಾಲಿ ಹುದ್ದೆಗಳ ವಿವರಗಳು :**

(1) ಉಪನಿರ್ದೇಶಕರು/ನಗರ ಯೋಜನಾ ಸದಸ್ಯರು –1

(2) ನಗರಯೋಜಕರು –1

(3) ಡ್ರಾಫ್ಸ್‌ಮೆನ್ –1

(4) ಟ್ರೇಸರ್ –1

(5) ಡಿ–ದರ್ಜೆ –1

**3) ಪ್ರಸ್ತಾಪಿತ ಪ್ರಗತಿ :**

ಪ್ರಾಧಿಕಾರದ ವಾಣಿಜ್ಯ ನಿವೇಶನದಲ್ಲಿ (100*100) ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಲು ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ ಪಡೆದು ಆಡಳಿತಾತ್ಮಕ ಅನುಮತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

**4. (1) ಸಂಪನ್ಮೂಲ ಕ್ರೋಢೀಕರಣ:**

ಅ) ಪ್ರಾಧಿಕಾರದಿಂದ ರಚಿಸಿರುವ ವಸತಿ ಬಡಾವಣೆಯಿಂದ ಬರುವ ಕಂದಾಯ ಶುಲ್ಕ, ನೀರಿನ ಶುಲ್ಕ, ಖಾತೆ ಬದಲಾವಣೆ ಶುಲ್ಕಗಳಿಂದ ಬರುವ ಆದಾಯ.

ಆ) ಪ್ರಾಧಿಕಾರದಿಂದ ಅನುಮೋದಿಸುವ ಖಾಸಗಿ ಬಡಾವಣೆಗಳಿಂದ ಬರುವ ಆದಾಯ.

ಇ) ನಾಗರೀಕ ಸೌಲಭ್ಯ ನಿವೇಶನ ಹಂಚಿಕೆಯಿಂದ ಬರುವ ಶೇಕಡ 25% ಆದಾಯ.

ಈ) ವಸತಿ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆಯಿಂದ ಬರುವ ಆದಾಯ.

**(2) ಮುನಿಸಿಪಾಲಿಟಿ ನಿಧಿ**

ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಯಾವುದೂ ಇರುವುದಿಲ್ಲ.

**(3) 2021–22ನೇ ಸಾಲಿನ ಆಯ–ವ್ಯಯ**

| | |
|---|---|
| ಪ್ರಾರಂಭಿಕ ಶಿಲ್ಕು | 32,20,610–00 |
| ನಿರೀಕ್ಷಿತ ಆದಾಯ | 4,57,60,000–00 |
| ಒಟ್ಟು | 4,12,40,000–00 |
| ನಿರೀಕ್ಷಿತ ಖರ್ಚು | 4,42,50,000–00 |
| ಆಖೈರು ಶಿಲ್ಕು | 47,30,610–00 |

**(4)ನಗರಾಭಿವೃದ್ಧಿ ಪ್ರಾಧಿಕಾರದ ಹಣಕಾಸಿನ ಸ್ಥಿತಿ :**

ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪರಿಶೋಧನಾ ಶುಲ್ಕ, ಉತ್ತಮತ್ತೆ ಶುಲ್ಕ, ಅಭಿವೃದ್ಧಿ ಶುಲ್ಕ, ಕೆರೆ ಅಭಿವೃದ್ಧಿ ಶುಲ್ಕ, ತೆರಿಗೆ ಇತ್ಯಾದಿಗಳು ಆದಾಯವಾಗಿರುತ್ತದೆ.

ವಾರ್ಷಿಕ ಅವಧಿಯಲ್ಲಿ ಅಂದರೆ ದಿನಾಂಕ: 01–04–2021 ರಿಂದ 31–03–2022ರ ವರೆವಿಗೆ, ಆದಾಯ ಮತ್ತು ವೆಚ್ಚ ಅನುಕ್ರಮವಾಗಿ ರೂ.1,10,48,387.00 ಮತ್ತು ರೂ. 76,26,127.00 ರೂಗಳಾಗಿರುತ್ತದೆ. ಪ್ರಾಧಿಕಾರಕ್ಕೆ ಪರಿಶೋಧನಾ ಶುಲ್ಕ, ಉತ್ತಮತೆ ಶುಲ್ಕ, ಅಭಿವೃದ್ಧಿ ಶುಲ್ಕ, ಮೇಲ್ವಿಚಾರಣೆ ಶುಲ್ಕ, ದಂಡ ಮತ್ತು ನಿವೇಶನಗಳ ಹಂಚಿಕೆಗಳಿದ ಬರುವ ಆದಾಯದಿಂದ ಪ್ರಾಧಿಕಾರದ ಆಡಳಿತ ವ್ಯವಸ್ಥೆ ಹಾಗೂ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿರುತ್ತದೆ.

**ವಾರ್ಷಿಕಆಯವ್ಯಯ :**

**2021–2022 ನೇ ಸಾಲಿನ ಆಯವ್ಯಯ ಅಂದಾಜು**

ಒಟ್ಟು ಆದಾಯ ರೂ. 4,57,60,000–00

ಒಟ್ಟು ಖರ್ಚು ರೂ. 4,42,50,000–00

**ಉಳಿಕೆ ರೂ. 47,30,610–00**

**(ಅ) ನಿಖರ ಆದಾಯ :01-04-2021ರಿಂದ 31-3-2022ರವರೆಗೆ**

| | | |
|---|---|---|
| ಪ್ರಾರಂಭಿಕ ಶುಲ್ಕ | ರೂ. | 80,17,952-00 |
| ನಿಖರ ಆದಾಯ | ರೂ. | 1,10,48,387-00 |
| **ಒಟ್ಟು** | **ರೂ.** | **1,90,66,339-00** |

**(ಆ) ನಿಖರ ವೆಚ್ಚ 01-04-2021ರಿಂದ 31-3-2022ರವರೆಗೆ**

| | | |
|---|---|---|
| **ನಿಖರ ವೆಚ್ಚ:** | **ರೂ.** | **76,26,127-00** |

**5. ಭೌತಿಕ ಪ್ರಗತಿ.**

ಈ ಪ್ರಾಧಿಕಾರವು ಮೇಲ್ಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ.

**6.ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ.**

| | | |
|---|---|---|
| ಅ) | ವಾರ್ಷಿಕಅನುಧಾನ ಮತ್ತು ಅದಕ್ಕೆಅನುಗುಣವಾಗಿ ಮಾಡಲಾದ ವೆಚ್ಚ. | ಈ ಪ್ರಾಧಿಕಾರಕ್ಕೆ 2021-22 ನೇ ಸಾಲಿನ ಯವುದೇಅನುದಾನ ಬಿಡುಗಡೆಯಾಗಿರುವುದಿಲ್ಲ. |
| ಆ) | ಬೇಡಿಕೆ, ವಸೂಲಿಮತ್ತುಬಾಕಿಪಟ್ಟೆ(ಡಿ.ಸಿ.ಬಿ) | ಈ ಪ್ರಾಧಿಕಾರದಲ್ಲಿ ಖಾಯಂ ಆದಾಯದ ಯಾವ ಮೂಲ ಇರುವುದಿಲ್ಲ. |
| ಇ) | ವಿಶೇಷ ಘಟಕಯೋಜನೆ/ಗಿರಿಜನಅಭಿವೃದ್ಧಿ ಯೋಜನೆಗಳು. | ಯಾವುದುಇರುವುದಿಲ್ಲ. |
| ಈ) | SFC / ವಿಶೇಷ ಅನುದಾನದ ವಿವರಗಳು. | ಯಾವುದುಇರುವುದಿಲ್ಲ. |
| ಉ) | ನಗರೋತ್ಥಾನ ಮತ್ತು ಮುಖ್ಯ ಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿಯೋಜನೆ. | ಯಾವುದುಇರುವುದಿಲ್ಲ. |
| ಊ) | ಇತರೆಯೋಜನೆ ವಿವರಗಳು. | ಯಾವುದುಇರುವುದಿಲ್ಲ. |
| ಋ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ, ಬಡಜನರಕಲ್ಯಾಣ ನಿಧಿ, ಹಾಗೂ ದಿವ್ಯಾಂಗರಕಲ್ಯಾಣ ನಿಧಿ, ಯೋಜನೆಗಳ ಪ್ರಗತಿ ಮತ್ತು ವಿವರ. | ಯಾವುದುಇರುವುದಿಲ್ಲ. |
| ಎ) | ಕೇಂದ್ರ ಪುರಸ್ಕೃತ/ವಿದೇಶಿ ನೆರವಿನ ಯೋಜನೆಗಳು. | ಮಂಜೂರುಆಗಿರುವುದಿಲ್ಲ. |

**7. ವಿಶೇಷ ಸಾಧನೆ / ಪ್ರಶಸ್ತಿ**

2021-22ನೇ ಸಾಲಿನಲ್ಲಿಯಾವುದೇ ವಿಶೇಷ ಸಾದನೆ/ ಪ್ರಶಸ್ತಿ ಪಡೆದಿರುವುದಿಲ್ಲ.

## 8. 2022-23 ನೇ ಸಾಲಿನ ಗುರಿ.

ಪ್ರಾಧಿಕಾರದ ವಾಣಿಜ್ಯ ನಿವೇಶನದಲ್ಲಿ ಬಹುಮಹಡಿಗಳ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.

ಸಹಿ/-
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಕೆ.ಜಿ.ಎಫ್.